# ಪಂಚಕೋಶ ವಿವೇಕ

ಹಿತ್ಲಳ್ಳಿ ಸೂರ್ಯನಾರಾಯಣ ಭಟ್ಟ

ಶ್ರೀಶಂಕರ ಭಗವತ್ಪಾದರು ವ್ಯಾಖ್ಯಾನಿಸಿದ ಉಪನಿಷತ್ತುಗಳಲ್ಲಿ ತೈತ್ತಿರಿಯೋಪನಿಷತ್ತು ಪ್ರಮುಖವಾದುದು. ಈ ಉಪನಿಷತ್ತಿನಲ್ಲಿ ಮೂರು ಭಾಗಗಳಿವೆ: ೧. ಶಿಕ್ಷಾವಲ್ಲೀ ೨. ಬ್ರಹ್ಮಾನಂದವಲ್ಲೀ ಮತ್ತು ೩. **ಭೃಗುವಲ್ಲೀ**. ಮೂರನೆಯ ಭಾಗವಾದ ಭೃಗುವಲ್ಲಿಯಲ್ಲಿ ಐದು ಕೋಶಗಳ ವಿವರಣೆ ಇದೆ. ಅನ್ನಮಯವೇ ಮೊದಲಾದ ಕೋಶಗಳ ಒಳಗಿರುವ ಅಂತರಾತ್ಮನೇ ಬ್ರಹ್ಮವೆಂದು ತೋರಿಸುವುದಕ್ಕಾಗಿಯೆ ಶಾಸ್ತ್ರವಲ್ಲಿ ಐದು ಕೋಶಗಳನ್ನು ನಿರೂಪಿಸಲಾಗಿದೆಯೇ ಹೊರತು. ಅವುಗಳು ನಿಜವಾಗಿಯೂ ಇವೆ ಎಂದರ್ಥವಲ್ಲ. ದೇಹ, ಪ್ರಾಣ, ಮನಸ್ಸು, ಬುದ್ಧಿ ಮುಂತಾದವುಗಳಲ್ಲಿ ಆತ್ಮಬುದ್ಧಿಯನ್ನು ಕ್ರಮಕ್ರಮವಾಗಿ ಕಳೆಯುವುದಕ್ಕಾಗಿ, ಪಂಚಕೋಶ ವಿವೇಕವನ್ನು ಹೇಳಿದೆ. ಹೊರಗಿರುವ ಕೋಶಗಳಿಗೆ ಒಳಗಿನ ಕೋಶಗಳು ಆತ್ಮವೆಂದು ಹೇಳಿ, ಕಡೆಗೆ ಆನಂದ ಮಯಕ್ಕೂ ಆಚೆಗಿನ ಆನಂದಸ್ವರೂಪವಾದ ಆತ್ಮವೇ ಬ್ರಹ್ಮವೆಂದು ತೋರಿಸುವುದೇ. ವ್ಯಕ್ತಿಯೊಬ್ಬನನ್ನು ಪಂಚಕೋಶಗಳಾಗಿ ಕಲ್ಪಿಸಿರುವದರ ಉದ್ದೇಶ. ಅದು ಹೇಗೆ ಎಂದರೆ, ಕಲ್ಲು ಮಣ್ಣು ಮುಂತಾದವುಗಳಿಂದ ಕೂಡಿದ ಧಾನ್ಯವನ್ನು ಶುದ್ಧಗೊಳಿಸಿ, ಸ್ವೀಕರಿಸುವುದಿಲ್ಲವೇ, ಹಾಗೆ.

## ೧. ಅನ್ನಮಯ ಕೋಶ

ಬ್ರಹ್ಮವು ಸತ್ಯವೂ ಜ್ಞಾನವೂ ಅನಂತವೂ ಆಗಿದೆ. ಅದರಿಂದ ಆಕಾಶವು ಉತ್ಪನ್ನವಾಯಿತು. ಆಕಾಶದಿಂದ ವಾಯು, ವಾಯುವಿನಿಂದ ಅಗ್ನಿ, ಅಗ್ನಿಯಿಂದ ಜಲ, ಜಲದಿಂದ ಪೃಥಿವಿ, ಪೃಥಿವಿಯಿಂದ ಓಷಧಿಗಳು, ಓಷಧಿಗಳಿಂದ ಅನ್ನ ಅಥವಾ ಆಹಾರ ಉಂಟಾಗುತ್ತದೆ. ಅನ್ನವು ರೇತಸ್ಸಾಗಿ ಪರಿಣಾಮ ಹೊಂದುತ್ತದೆ. ಅದರಿಂದ ಮನುಷ್ಯನು ಹುಟ್ಟುತ್ತಾನೆ. ಹೀಗೆ ಪುರುಷನು ಅನ್ನರಸರೂಪಿ ಎಂದು ತೈತ್ತಿರೀಯ ಉಪನಿಷತ್ತಿನಲ್ಲಿ ವರ್ಣಿಸಲಾಗಿದೆ. ಅನ್ನಮಯ ಆತ್ಮನನ್ನು ತಲೆ, ಕೈ, ಕಾಲುಗಳಿರುವ ಪುರುಷನೆಂದು ಶ್ರುತಿ ಔಪಚಾರಿಕವಾಗಿ ಬಣ್ಣಿಸುತ್ತದೆ. ಭೂಮಿಯಲ್ಲಿರುವ ಸ್ಥಾವರ-ಜಂಗಮಾತ್ಮಕವಾದ ಜೀವಿಗಳೆಲ್ಲರೂ ಅನ್ನದಿಂದಲೇ ಜನಿಸಿವೆ, ಅನ್ನದಿಂದಲೇ ಬದುಕುತ್ತವೆ ಅಥವಾ ಬೆಳೆಯುತ್ತವೆ, ಕೊನೆಗೆ ಅನ್ನದಲ್ಲಿಯೆ ಲೀನವಾಗುತ್ತವೆ. ಅದು ಜೀವಗಳ ಹಸಿವೆಯನ್ನು ನೀಗಿಸುತ್ತದೆ. ಎಲ್ಲ ಜೀವಿಗಳ ಹುಟ್ಟು, ಇರುವಿಕೆ ಮತ್ತು ಸಾವುಗಳು ಸ್ಥೂಲದೇಹಕ್ಕೆ ಸಂಬಂಧಪಟ್ಟವುಗಳೇ ಆಗಿದ್ದು, ಆ ಸ್ಥೂಲ ಉಂಟಾಗಿರುವುದು ಅನ್ನದಿಂದಲೇ. ಆದ್ದರಿಂದ ಅನ್ನವನ್ನು **ಸರ್ವೌಷಧಿ** ಎನ್ನುತ್ತಾರೆ.

ಒಟ್ಟಿನಲ್ಲಿ, ನಮ್ಮ ಸ್ಥೂಲಶರೀರವು ಆಹಾರದಿಂದ ಆದುದು. ಅದನ್ನು ಕೋಶವೆಂದು ಕಲ್ಪಿಸಿಕೊಂಡು, ಅನ್ನಮಯಕೋಶ ಎಂದು ಕರೆದಿದ್ದಾರೆ. ಅದನ್ನೇ ಆತ್ಮವೆಂದು ಕಲ್ಪಿಸಿಕೊಂಡು, ಅನ್ನಮಯ ಪುರುಷ ಎಂದು ಕರೆದು, ಅವನಿಗೆ ರೂಪವಿದೆ ಎಂದು ಭಾವಿಸಿದ್ದಾರೆ. ಹೀಗೆ ಅನ್ನಮಯ ಕೋಶವನ್ನು ಶ್ರುತಿಯು ವರ್ಣಿಸುತ್ತದೆ.

## ೨. ಪ್ರಾಣಮಯ ಕೋಶ

ಅನ್ನಮಯವೆಂದು ಹೆಸರಿಸಿದ ಆತ್ಮನ ಒಳಗೆ, ಅದಕ್ಕಿಂತಲೂ ಬೇರೆಯದಾದ. ಪ್ರಾಣಮಯನೆಂಬ ಆತ್ಮನಿದ್ದಾನೆ ಎಂದು ಉಪನಿಷತ್ತು ಹೇಳುತ್ತದೆ. ಚರ್ಮದ ಚೀಲವು ಗಾಳಿಯಿಂದ ತುಂಬಿರುವಂತೆ, ಪ್ರಾಣಮಯ ಆತ್ಮನು ಅನ್ನಮಯವನ್ನು ವ್ಯಾಪಿಸಿಕೊಂಡಿದ್ದಾನೆ. ಪ್ರಾಣಮಯನನ್ನೂ ಅನ್ನಮಯ ಪುರುಷನಂತೆಯೇ ತಲೆ, ಕೈ, ಕಾಲುಗಳಿರುವ ಪುರುಷನೆಂದು ಶ್ರುತಿ ವರ್ಣಿಸುತ್ತದೆ. ಎಲ್ಲ ಇಂದ್ರಿಯಗಳೂ ಮನುಷ್ಯರೂ ಪಶುಗಳೂ ವಾಯುರೂಪನಾದ ಪ್ರಾಣವನ್ನು ಅನುಸರಿಸಿ ಜೀವಿಸುತ್ತವೆ. ಏಕೆಂದರೆ, ಪ್ರಾಣವೇ ಜೀವಿಗಳ ಆಯಸ್ಸು. ಪ್ರಾಣವು ಹೋದರೆ ಮರಣವಾಗುವುದರಿಂದ ಪ್ರಾಣವನ್ನು **ಸರ್ವಾಯುಷ** ಎಂದು ಹೇಳಲಾಗಿದೆ. ಹಿಂದೆ ಹೇಳಿದ ಅನ್ನಮಯನಿಗೆ ಪ್ರಾಣಮಯನೇ ತನ್ನ ಶರೀರದಲ್ಲಿರುವ ಆತ್ಮನಂತೆ ಗೋಚರವಾಗುತ್ತಾನೆ.

## ೩. ಮನೋಮಯ ಕೋಶ

ಪ್ರಾಣಮಯನಿಗಿಂತಲೂ ಬೇರೆಯಾದ, ಸಂಕಲ್ಪ, ವಿಕಲ್ಪಗಳನ್ನು ಮಾಡುವ ಮನಸ್ಸಿನಿಂದ ಕೂಡಿದ, ಮನೋಮಯನೆಂಬ ಒಳಗಿನ ಆತ್ಮನಿದ್ದಾನೆ ಎಂದು ಉಪನಿಷತ್ತು ಹೇಳುತ್ತದೆ. ಇಲ್ಲಿ ಪ್ರಾಣಮಯವೇ ಶರೀರವಾಗುತ್ತದೆ. ಮನೋಮಯವೇ ಅದರ ಆತ್ಮದಂತೆ ಇರುತ್ತದೆ. ಆದ್ದರಿಂದ ಪ್ರಾಣಮಯವು ಮನೋಮಯದಿಂದ ವ್ಯಾಪ್ತವಾಗಿದೆ ಎಂದು ಹೇಳಬಹುದು. ಮನೋಮಯ ಪುರುಷನಿಗೆ ಯಜುರ್ವೇದವೇ ತಲೆ, ಋಗ್ವೇದವೇ ಬಲಗೈ, ಸಾಮವೇದವೇ ಎಡಗೈ. ವೇದದ ಬ್ರಾಹ್ಮಣ ಭಾಗವು ನಡುಭಾಗ, ಅಥರ್ವವೇದ ಮಂತ್ರಗಳೇ ಆಧಾರ. ಹೀಗೆ ಉಪನಿಷತ್ತು ವರ್ಣಿಸುತ್ತದೆ.

ಹೀಗೆ ವರ್ಣಿಸಿದುದರ ಮಹತ್ವ ಏನು? ಯಜ್ಞಕರ್ಮಗಳಲ್ಲಿ ಯಜುರ್ವೇದ ಮಂತ್ರಗಳಿಗೆ ಅತ್ಯಂತ ಮಹತ್ವವಿದೆ. ಆದ್ದರಿಂದ ಅದನ್ನು ಮನೋಮಯ ಪುರುಷನ ಶಿರಸ್ಸೆಂದು ಹೇಳಿರಬಹುದು. ವೇದಮಂತ್ರಗಳನ್ನು ಸರಿಯಾಗಿ ಅಧ್ಯಯನ ಮಾಡಲು ಜ್ಞಾನೇಂದ್ರಿಯಗಳಿಂದ ಕೂಡಿದ ಶಿರಸ್ಸು ಅವಶ್ಯಕ. ವೈದಿಕ ಕ್ರಿಯೆಗಳನ್ನು ಮಾಡಲು ಸಹಾಯಕವಾದ್ದರಿಂದ, ಋಕ್ ಮತ್ತು ಸಾಮವೇದಗಳನ್ನು ಪುರುಷನ ಕೈಗಳಿಗೆ ಹೋಲಿಸಿದೆ. ಇವೆರಡೂ ವೇದಗಳ ಮಂತ್ರಗಳು ಪ್ರಾರ್ಥನೆಗಾಗಿ ಮೀಸಲಾಗಿವೆ. ಬ್ರಾಹ್ಮಣ ಭಾಗದಲ್ಲಿ, ಯಜ್ಞಕ್ರಿಯೆಗಳನ್ನು ನಿಯಂತ್ರಿಸುವ ಆದೇಶ ಅಥವಾ ಉಪದೇಶಗಳು ಇವೆ, ಇದರಿಂದ ಅದನ್ನು ಆತ್ಮ ಎನ್ನಲಾಗಿದೆ. ಯಜ್ಞವನ್ನು ರಕ್ಷಿಸುವ ಹಾಗೂ ಪುಷ್ಟಿಗೊಳಿಸುವ ಮಂತ್ರಗಳು ಅಥರ್ವವೇದದಲ್ಲಿವೆ, ಇದರಿಂದ ಅದನ್ನು ಆಧಾರವೆಂದು ಕರೆದಿದೆ. ಮನಸ್ಸು, ಕಾಮ ಸಂಕಲ್ಪ ಮುಂತಾದ ರೂಪಗಳಲ್ಲಿ ಕಾಣಿಸಿಕೊಳ್ಳುತ್ತದೆಯಷ್ಟೆ. ಅದೇ ರೀತಿ, ವೇದವೂ ಕಾಮ ಸಂಕಲ್ಪ ಮುಂತಾದವುಗಳಿಂದ ತುಂಬಿಕೊಂಡಿದೆ. ಇದರ ತಾತ್ಪರ್ಯ ಇಂತಹ ವೇದವನ್ನು ಮೀರಿದರೆ ಮಾತ್ರ ಬ್ರಹ್ಮ ಸಾಕ್ಷಾತ್ಕಾರವಾಗುತ್ತದೆ ಎಂದು. ಏಕೆಂದರೆ, ವೇದಗಳ ಕರ್ಮಕಾಂಡ ಭಾಗದಲ್ಲಿ, ಸಾಂಸಾರಿಕ ವಿಷಯಗಳೇ ಹೆಚ್ಚು.

ಈ ಸಂದರ್ಭದಲ್ಲಿ, ಬ್ರಹ್ಮಾನಂದವನ್ನು ಅನುಭವಿಸಿದ ಮನುಷ್ಯನ ವೈಭವವನ್ನು ತಿಳಿಸಲಾಗಿದೆ. ಆ ಮೂಲಕ ಮನೋಮಯ ಶರೀರದ ಮಹತ್ವವನ್ನು ಬಿಂಬಿಸಲಾಗಿದೆ. ಬ್ರಹ್ಮಾನಂದವು ಮನಸ್ಸಿಗಾಗಲಿ, ಮಾತಿಗಾಗಲಿ ನಿಲುಕುವುದಿಲ್ಲ. ಮನಸ್ಸು ಮತ್ತು ಇಂದ್ರಿಯಗಳು ಮನೋಮಯದ ಶರೀರದಲ್ಲಿ ಸೇರುತ್ತವೆ. ಅವುಗಳ ನೆರವಿಲ್ಲದೆ

ಬ್ರಹ್ಮನನ್ನು ತಲುಪಲು ಸಾಧ್ಯವಿಲ್ಲ. ಆದರೆ ಅವು ಸಾಧಕನನ್ನು ಬ್ರಹ್ಮದವರೆಗೆ ಕರೆದುಕೊಂಡು ಹೋಗುತ್ತವೆಯೇ ಹೊರತು, ಅದರ ಜ್ಞಾನವನ್ನು ಮಾಡಿಸಲಾರವು. ಅದಕ್ಕೆಂದೇ ಬ್ರಹ್ಮನನ್ನು ತಲುಪಲಾರದೆ ಅವುಗಳು ಹಿಂದಿರುಗುತ್ತವೆ ಎಂದು ಉಪನಿಷತ್ತು ಹೇಳುತ್ತದೆ. ಬ್ರಹ್ಮನನ್ನು ಪಡೆದವನು ಎಂದೆಂದೂ ಭಯಪಡಲಾರ. ಏಕೆಂದರೆ, ಅವನಿಗೆ ಸತ್ಯದ ಸಾಕ್ಷಾತ್ಕಾರವಾಗಿರುತ್ತದೆ.

### ೪. ವಿಜ್ಞಾನಮಯ ಕೋಶ

ಮನೋಮಯ ಪುರುಷನಿಗಿಂತ ಬೇರೆಯಾಗಿ, ಒಳಗೆ ವಿಜ್ಞಾನ ಮಯ ಪುರುಷನಿದ್ದಾನೆ. ವಿಜ್ಞಾನಮಯ ಆತ್ಮನಿಗೆ ಯಜ್ಞದಲ್ಲಿ ಸರ್ವಪ್ರಥಮವಾದ ಶ್ರದ್ಧೆಯೇ ಶಿರಸ್ಸು, ಋತವು(ಶಾಸ್ತ್ರನಿಶ್ಚಿತವಾದ ಅರ್ಥ) ಬಲಗೈ ಮತ್ತು ವಾಗ್ರೂಪವಾದ ಸತ್ಯವು ಎಡಗೈ. ಯೋಗವು (ಸಮಾಧಾನ) ಮಧ್ಯಭಾಗ, ಮಹಃ( ಹಿರಣ್ಯಗರ್ಭ ಅಥವಾ ಪ್ರಥಮಜ) ಆಧಾರಭೂತವಾದದ್ದು. ಈ ಆತ್ಮನು ಮನೋಮಯಕ್ಕಿಂತಲೂ ಸೂಕ್ಷ್ಮನಾದವನು. ವಿಜ್ಞಾನಮಯ ಪುರುಷನು ಬುದ್ಧಿಯ ಗುಹೆ ಯಲ್ಲಿದ್ದು ಅದರಲ್ಲಿ ಒಂದಾಗಿದ್ದಾನೆ. ಅವನನ್ನು ಜೀವಾತ್ಮ ಎಂದೂ ಕರೆಯುತ್ತಾರೆ. ಹೀಗಾಗಿ ಅವನು ಮನೋಮಯ ಶರೀರವನ್ನು ಮಾತ್ರವಲ್ಲ, ಹಿಂದಿನ ಎಲ್ಲ ಶರೀರಗಳನ್ನೂ, ಅಂದರೆ ಪ್ರಾಣಮಯ, ಮನೋಮಯ, ಅನ್ನಮಯ ಶರೀರಗಳನ್ನು ವ್ಯಾಪಿಸಿದ್ದಾನೆ ಎಂದು ಅರ್ಥವಾಗುತ್ತದೆ. ಅವನನ್ನು ಭಗವದ್ಗೀತೆಯಲ್ಲಿ ಕ್ಷೇತ್ರಜ್ಞನೆಂದು ಕರೆದಿದ್ದಾರೆ.

ವಿಜ್ಞಾನವೆಂದರೆ ಬುದ್ಧಿ. ಕರ್ಮಗಳನ್ನು ಮಾಡುವಲ್ಲಿ ಅದು ಪ್ರಮುಖ ಪಾತ್ರವನ್ನು ವಹಿಸುತ್ತದೆ. ವಿಜ್ಞಾನಾತ್ಮ ಅಥವಾ ಜೀವಾತ್ಮನೇ ಎಲ್ಲಾ ಕರ್ಮಗಳನ್ನು ಮಾಡುವಂತೆ ಪ್ರೇರೇಪಿಸುತ್ತಾನೆ. ಅವನನ್ನೇ ಕರ್ತೃ ಎನ್ನುವುದು.

### ೫. ಆನಂದಮಯ ಕೋಶ

ವಿಜ್ಞಾನಮಯ ಪುರುಷನಿಗಿಂತ ಭಿನ್ನವಾದ ಕಾರ್ಯಾತ್ಮನಾದ ಆನಂದಮಯ ಪುರುಷನಿದ್ದಾನೆ. ಹಿಂದಿನ ಕೋಶಗಳಿಗೆ ಇದ್ದಂತೆ ಶಿರಸ್ಸು ಮುಂತಾದ ಕಲ್ಪನೆಗಳು ಸಮಾನವಾಗಿವೆ. ಇಷ್ಟವಾದ ವಸ್ತುವಿನ ದರ್ಶನದಿಂದ ಉಂಟಾಗುವ ಪ್ರಿಯವು ಆನಂದಮಯ ಪುರುಷನ ಶಿರಸ್ಸು, ಅದರಿಂದ ಉಂಟಾಗುವ ಮೋದವು (ಹರ್ಷ) ಬಲಗೈ. ಪ್ರಮೋದವು (ಅತ್ಯಂತ ಹರ್ಷ) ಎಡಗೈ. ಸುಖಸಾಮಾನ್ಯವಾದ ಆನಂದವು ಮಧ್ಯದಲ್ಲಿರುವ ಆತ್ಮ. ಬ್ರಹ್ಮವು ಆಧಾರ.

ಆನಂದಮಯ ಆತ್ಮನೆಂದರೆ, ಎಲ್ಲರಿಗೂ ಪ್ರಿಯವಾದವನು ಎಂದರ್ಥ. ಎಲ್ಲಾ ಪ್ರಾಣಿಗಳೂ ಆನಂದವನ್ನು ಪ್ರೀತಿಸುತ್ತವೆ. ಆದರೆ ಅಜ್ಞಾನವಿರುವುದರಿಂದ ಅವು ಅದನ್ನು ಪಡೆಯಲಾರವು. ಶ್ರೀಶಂಕರ ಭಗವತ್ಪಾದರು ಆನಂದಮಯನೇ ಅಂತಿಮ ಸತ್ಯವಲ್ಲ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಅವರು ಅದನ್ನು 'ಜೀವ' ವೆಂದು ಹೇಳಿದ್ದಾರೆ. ಅವರು ವಿವೇಕಚೂಡಾಮಣಿಯಲ್ಲಿ ಹೀಗೆ ಹೇಳುತ್ತಾರೆ:

**ನೈವಾಯಮಾನಂದಮಯಃ ಪರಾತ್ಮಾ**
**ಸೋಪಾಧಿಕತ್ವಾತ್ ಪ್ರಕೃತೇರ್ವಿಕಾರಾತ್ ।**
**ಕಾರ್ಯತ್ವಹೇತೋಃ ಸುಕೃತಕ್ರಿಯಾಯಾ**
**ವಿಕಾರಸಂಘಾತಸಮಾಹಿತಾತ್ಮಾ ॥**

ಆನಂದಮಯನು ಮುಖ್ಯ ಆತ್ಮನಲ್ಲ. ಏಕೆಂದರೆ ಅವನು ಸೋಪಾಧಿಕ ನಾಗಿದ್ದಾನೆ (ಉಪಾಧಿಯೆಂದರೆ, ಸೀಮಿತತೆ ಮಾಡಲು ಬೇಕಾಗುವ ವಸ್ತು. ಉದಾಹರಣೆಗೆ, ಎಲ್ಲೆಲ್ಲಿಯೂ ಇರುವ ಆಕಾಶವನ್ನು, ಗಡಿಗೆಯ ಸೀಮಿತ ಪ್ರದೇಶದಲ್ಲಿ ನೋಡಿ, ಗಡಿಗೆಯ ಆಕಾಶವೆನ್ನುತ್ತೇವೆ. ಇಲ್ಲಿ ಗಡಿಗೆಯು ಆಕಾಶಕ್ಕೆ ಉಪಾಧಿ). ಆನಂದಮಯನು ಪ್ರಕೃತಿಯ ವಿಕಾರ ವಾಗಿದ್ದಾನೆ; ಪುಣ್ಯಕರ್ಮದ ಫಲವಾಗಿದ್ದಾನೆ. ವಿಕಾರ ಸಮೂಹದಿಂದ (ದರ್ಶನ, ಲಾಭ, ಭೋಗಗಳಿಂದ ಉಂಟಾದ ಅವಯವಗಳ ಸಮುದಾಯದಿಂದ) ಆವರಿಸಲ್ಪಟ್ಟಿದ್ದಾನೆ. (ಶ್ಲೋಕ, ೨೧೧)

ಈ ಆನಂದಮಯನಿಗೆ ಬ್ರಹ್ಮನೇ ಆಧಾರ. ಮುಂದೆ ಅದನ್ನು **ರಸ** ಎಂದು ತೈತ್ತಿರಿಯೋಪನಿಷತ್ತು ಬಣ್ಣಿಸುತ್ತದೆ. ಅದಲ್ಲದೆ, ಮನುಷ್ಯನ ಆನಂದವು ಅತ್ಯಲ್ಪವೆಂದೂ ಬ್ರಹ್ಮಾನಂದವು ಅಪರಿಮಿತವೆಂದೂ ಬಹು ಸುಂದರವಾಗಿ ಈ ಸಂದರ್ಭದಲ್ಲಿ ಪ್ರತಿಪಾದಿಸಲಾಗಿದೆ.

### ಪಂಚಕೋಶ ವಿವೇಕ

ಇಲ್ಲಿ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ – ಎಂಬುವುಗಳನ್ನು ಜಿಜ್ಞಾಸುವು ಕ್ರಮಕ್ರಮವಾಗಿ ಆತ್ಮನೆಂದು ಭಾವಿಸುತ್ತ ಹೋಗುತ್ತಾನೆ. ಆದರೆ, ನಿಜವಾಗಿ ಅವುಗಳು ಆತ್ಮವಲ್ಲ, ಒಂದನ್ನೊಂದು ವ್ಯಾಪಿಸಿಕೊಂಡಿರುವ ಆತ್ಮನ ಕೋಶಗಳು. ಕತ್ತಿಯನ್ನು ಮುಚ್ಚಿಕೊಂಡಿರುವ ಒರೆಯಂತೆ ಅವು ಆತ್ಮನನ್ನು ಮುಸುಕಿ ಕೊಂಡು, ತಾನೇ ಆತ್ಮನೆಂಬ ಭ್ರಾಂತಿಯನ್ನು ಉಂಟುಮಾಡುತ್ತವೆ.

ಅನ್ನಮಯವಾದ ನಮ್ಮ ಶರೀರ ಹೊರಗಿನ ಸ್ಥೂಲಪ್ರಪಂಚದ ಒಂದು ಭಾಗ. ಪ್ರಾಣಮಯವು ಕ್ರಿಯಾತ್ಮಕವಾದುದು. ಇದು ಸಮಷ್ಟಿ ವಾಯುವಿನ ಒಂದು ಭಾಗ. ಈ ಉಪಾಧಿಯಿಂದಲೇ ನಾವು ಪ್ರಾಣಿ ಗಳೆನಿಸಿರುತ್ತೇವೆ. ಮನೋಮಯವು ಸಮಷ್ಟಿ ಮನಸ್ಸಿನ ಒಂದು ಭಾಗ. ಈ ಉಪಾಧಿಯಿಂದ ಮಂತೃ(ಮನನಮಾಡುವವನು) ಎಂದೆನಿಸಿಕೊಂಡಿದ್ದೇವೆ. ವಿಜ್ಞಾನಮಯವೆಂದರೆ, ಕರ್ಮವನ್ನು ಮಾಡುವ ಭಾಗ. ಈ ವಿಜ್ಞಾನವೆಂಬ ಉಪಾಧಿಯಿಂದಲೇ ನಾವು ಜ್ಞಾತೃ, ಕರ್ತೃ ಎಂದೆನಿಸಿಕೊಂಡಿದ್ದೇವೆ. ಅದರಂತೆಯೇ ಆನಂದ ಮಯವು ಆತ್ಮನ ಭೋಗಿಸುವ ಉಪಾಧಿಯಾಗಿರುತ್ತದೆ. ಹೀಗೆ ಅನ್ನಮಯವನ್ನು ಹಿಡಿದು ಆನಂದಮಯದವರೆಗಿನ ಐದು ಕೋಶ ಗಳೂ ಆತ್ಮನ ಉಪಾಧಿಗಳೇ. ಅದನ್ನು ಅರಿಯದೆ, ನಾವು ಅವನ್ನು ಆತ್ಮನೊಡನೆ ಬೆರೆಸಿಕೊಂಡು, ವ್ಯವಹಾರ ಮಾಡುತ್ತ, ಅವೇ ಆತ್ಮನೆಂಬ ಭ್ರಾಂತಿಗೆ ಒಳಗಾಗಿದ್ದೇವೆ. ಅದೇ ನಮ್ಮ ಅವಿದ್ಯೆಗೆ ಕಾರಣ.

ಎಲ್ಲಕ್ಕೂ ಆಧಾರವಾಗಿರುವ ಆತ್ಮನು ಈ ಕೋಶಗಳಿಗೆ ಅತೀತನಾಗಿ ಸಾಕ್ಷಿಯಾಗಿರುತ್ತಾನೆ ಎನ್ನುವುದನ್ನು ತಿಳಿಸುವುದೇ ಪಂಚಕೋಶ ವಿವೇಕ ಬೋಧನೆಯ ಮುಖ್ಯ ಉದ್ದೇಶ. ಸರ್ವಾಂತರನೂ ಸರ್ವಸಾಕ್ಷಿಯೂ ಆಗಿದ್ದು, ನಿರ್ವಿಶೇಷ ಆನಂದ ಸ್ವರೂಪನಾದ ಆತ್ಮನನ್ನು ಮೇಲೆ ಹೇಳಿದ ಕ್ರಮದಿಂದ ಅರಿತುಕೊಳ್ಳಬೇಕು. ಹಾಗೆ ಅರಿತುಕೊಂಡಾಗ, ದೇಹಾದಿಗಳ ಜೊತೆಗಾಗಲಿ, ಹೊರಗಿನ ಪ್ರಪಂಚದ ಜೊತೆಗಾಗಲಿ ತಾದಾತ್ಮ್ಯ ಉಂಟಾಗುವುದಿಲ್ಲ. ಆಗ ಸಂಸಾರಭಯವು ನೀಗುತ್ತದೆ; ತನ್ನ ಸ್ವರೂಪದಲ್ಲಿಯೇ ಸಿದ್ಧನು ನೆಲೆನಿಲ್ಲುತ್ತಾನೆ. ಇದೇ ತೈತ್ತಿರೀಯ ಉಪನಿಷತ್ತಿನ ಉಪದೇಶವಾಗಿದೆ.